ಪೇಟೆಯಲ್ಲಿದ್ದು ಬಂದಿದ್ದ ಸಣ್ಣನಾಯಕ ಹಣ ಸಂಪಾದನೆಗೆ ಪೇಟೆಯೇ ಸರಿ, ಅಲ್ಲಿ ಯಾವುದಾದರೂ ಕೆಲಸ ಸಿಗುತ್ತದೆ, ಹಣ ಕೂಡಿಸಿಕೊಂಡು ಬಂದುಬಿಡು ಅಂತ ಧೈರ್ಯ ತುಂಬಿದ್ದ. ಆದರೆ, ಅವ್ವ ಬಿಲ್ ಕುಲ್ ಬೇಡ ಅಂದುಬಿಟ್ಟಿದ್ದಳು. ಅದು ತಾಯಿ ಕರುಳು. ಆದರೆ, ಆ ತಾಯಿ ನರಳಾಡುವುದು ನೋಡಿ ಸುಮ್ಮನಿರಲಾಗಲಿಲ್ಲ. ನಿರ್ಧಾರ ಮಾಡಿ ಬಂದುಬಿಟ್ಟಿದ್ದ. ಏನೂ ಗೊತ್ತಿಲ್ಲದ ಜಾಗದಲ್ಲಿ ನೀನೇ ಅನ್ನುವರಿಲ್ಲದ ಪರದೇಶಿ ಪೇಟೆಯಲ್ಲಿ ಕೆಲಸ ಗಿಟ್ಟಿಸುವುದು ಸಣ್ಣನಾಯಕ ಹೇಳಿದಷ್ಟು ಸುಲಭವಾಗಿರಲಿಲ್ಲ. ಯಾವುದಾದರೊಂದು ಕೆಲಸಕ್ಕಾಗಿ ವಾರಗಟ್ಟಲೆ ನಿದ್ದೆ, ನೆಮ್ಮದಿ ಇಲ್ಲದೇ ಅಲೆದಾಡಿದ. ಒಂದು ದಿನ ಸಾರಕ್ಕಿ ಮಾರುಕಟ್ಟೆ ಮೂಲೆಯಲ್ಲಿ ಖಾಲಿ ಆಟೋದಲ್ಲಿ ನಾಗಲಿಂಗಸ್ವಾಮಿ ಸಿಕ್ಕಿದ. ಅವನ ಆಟೋದಲ್ಲಿ ಕೆಲಸ ಮಾಡುತ್ತಿದ್ದ ತಿರುಚನಾಪಳ್ಳಿ ಹುಡುಗ ಹೇಳದೆ ಕೇಳದೆ ಹೋಗಿ ಬಿಟ್ಟಿದ್ದರಿಂದ ಅವನ ಕೃಪೆಯಿಂದಾಗಿ ಈ ಚಾಕರಿ ಸಿಕ್ಕಿತ್ತು. ಇದನ್ನೇ ಒಪ್ಪಿಕೊಂಡಿದ್ದ.

ಡ್ರೈವರ್ ನಾಗಲಿಂಗಣ್ಣ ದಿನಗೂಲಿ ಲೆಕ್ಕವೆಂದು ಹೇಳಿದ್ದ. ಅದರಂತೆ ಮಾದೇವ ಕಸ ತುಂಬಿ ಸುರಿಯುವ ಚಾಕರಿ ಮಾಡತೊಡಗಿದ. ಮೊದಲ ತಿಂಗಳ ಕೂಲಿ ಕೇಳಿದ್ದ. ಒಟ್ಟಿಗೆ ಸಿಗುತ್ತದೆಯಲ್ಲ ಆತುರ ಯಾಕೆ, ಕೆಲಸ ಮಾಡು ಅಂತ ಡ್ರೈವರಣ್ಣ ಹೇಳಿದ್ದ. ಎರಡನೆಯ ತಿಂಗಳೂ ಕಳೆಯಿತು. ಈಗ ಮೂರು ತಿಂಗಳು ಮುಗಿದಿದ್ದರೂ ಕೂಲಿ ಸಿಕ್ಕಿರಲಿಲ್ಲ. ಡ್ರೈವರಣ್ಣನ ಕೇಳಿದರೆ ಮೇಸ್ತ್ರಿಗೆ ಹೇಳಿದ್ದೀನಿ ಅಂತಷ್ಟೇ ಹೇಳುತ್ತಿದ್ದ. ದಿನ ಕಳೆದಂತೆ ಅವ್ವನ ನೆನಪು ಕಾಡತೊಡಗಿತು. ಅಲ್ಲಿ ಒಬ್ಬಳೇ ಇದ್ದಾಳೆ. ಅವಳ ಹೊಟ್ಟೆಗೆಡ್ಡೆ ತೆಗೆಸಬೇಕು, ಮೊದಲು ತಾನು ಹೋಗಬೇಕು.

ಶಿವ, ಮಾದೇವನನ್ನೇ ನೋಡುತ್ತಿದ್ದ. ಕಣ್ಣು ಕೆಂಪಗೆ ಅರಳಿದ್ದವು. ಮುಖದ ಗಡ್ಡ ಆತಂಕವನ್ನು ಅದಿಮಿ ಹಿಡಿದಂತ್ತಿತ್ತು. ಎಲ್ಲವನ್ನೂ ಮೆಟ್ಟಿ ನಿಂತಂತೆ ಅಲ್ಲಿ ಮುಗ್ಧತೆಯೇ ಎದ್ದು ಕಾಣುತ್ತಿತ್ತು. ಕುಲಗೋತ್ರ ಇಲ್ಲದ ಇಂಥ ಸಹಸ್ರಾರು ಮುಗ್ಧ ಜೀವಿಗಳ ಹೆಗಲ ಮೇಲೆ ನಗರದ ಮುಕ್ಕಾಲು ಭಾಗದ ಕೆಲಸ ನಿಂತಿದೆ. ಶಿವನಿಗೆ ಏನೋ ಹೇಳಬೇಕು ಅನಿಸಿತು. ಆದರೆ, ಬಾಯಿ ಬರಲಿಲ್ಲ. ನಾಳೆ ಏನು ಬರುವುದೋ ಗೊತ್ತಿಲ್ಲ. ಅದರ ಮೇಲೆ ಭರವಸೆಯೊಂದೇ ಗಟ್ಟಿ. ಅಲ್ಲಿ ದಡ ಚಿಮ್ಮಿ ಆಚೆ ದಾಟಿಬಿಡಬಹುದೆಂಬ ನಿರೀಕ್ಷೆಯೇ ಬದುಕಿಗೆ ಬಲ!

ಶಿವ 'ಮೇಸ್ತ್ರಿಯ ಲೆಕ್ಕದ ರಿಜಿಸ್ಟರಿನಲ್ಲಿ ನಿನ್ನ ಹೆಸರು ಇದೆಯಾ? ಮೂರು ತಿಂಗಳಿಂದ ಕೂಲಿ ಬಂದಿಲ್ಲ ಅಂತಿದ್ದಿ?' ಕುತೂಹಲದಿಂದ ಕೇಳಿದ. ಮಾದೇವ 'ಆಂ! ಹೆಸ್ರು ಬರೆಸಬೇಕಾ?' ಅಂತ ಮುಗ್ಧವಾಗಿ ರಾಗ ಎಳೆದ. ಶಿವ ಹುಸಿನಗೆಯೊಂದು ಬೀರಿ ದೀರ್ಘ ಉಸಿರುಬಿಟ್ಟ. ತಾನು ಬಂದ ಹೊಸದರಲ್ಲಿ ತನ್ನದೂ ಇದೇ ಆಗಿತ್ತಲ್ಲ! ಆದರೆ, ನಾನಂತೂ ಡ್ರೈವರ ಮೇಲೆ ಭಾರ ಹಾಕಿ ಸುಮ್ಮನಿರಲಿಲ್ಲ. ಮುಗ್ಧತೆ ಕೆಲವರ ದೃಷ್ಟಿಯಲ್ಲಿ ದಡ್ಡತನವೂ ಇಲ್ಲವೆ ದುರುಪಯೋಗವೂ ಆಗುವುದುಂಟು...

ಶಿವ ಈಗ ಕೊಂಚ ಕಠಿಣವಾಗಿ 'ಇಲ್ಲಿ ಮೂರು ಮತ್ತೊಂದು ಜನ ಈ ಕೆಲಸ ಮಾಡ್ತಿಲ್ಲಪ್ಪ. ನಗರದ ಹತ್ತಾರು ಕಡೆ ನೂರಾರು ಆಟೋಗಳು, ಮಿನಿ ಲಾರಿಗಳು ಕಸ ತುಂಬ್ಕೊಂಡು ಓಡಾಡ್ತವೆ. ಸಾವಿರಾರು ಮಂದಿ ಕಸ ತುಂಬಿ ಸುರಿಯೋ ಚಾಕರಿ ಮಾಡ್ತಾ ಅವರೆ. ಅವರಲ್ಲಿ ಎಷ್ಟು ಜನದ ಲೆಕ್ಕ ಇದೆಯೋ? ಇನ್ನೆಷ್ಟು ಜನ ಲೆಕ್ಕಗಳಿಲ್ಲದೆ ಇದ್ದಾರೋ ಗೊತ್ತಿಲ್ಲ. ಐದಾರು ವರ್ಷದಿಂದ ಇಲ್ಲಿ ಕೆಲಸ ಮಾಡ್ತಿರೋ ಸುಂದರರಾಜನೇ ಅನುಮಾನ ಪಡ್ತಾನೆ...' ಹೇಳಿದ.

ಮಾದೇವನಿಗೆ ಈಗ ದಿಟವಾಗಿ ದಿಗಿಲಾಯಿತು. ಈ ಶಿವ ಏನು ಹೇಳುತ್ತಿದ್ದಾನೆ. ತಳಬುಡ ತಿಳಿಯಲಿಲ್ಲ. ಸರಕ್ಕನೆ ತನ್ನ ಡ್ರೈವರಣ್ಣನ ಕಡೆ ತಿರುಗಿದ. ಅವನು ಅದೇ ಮೊಬೈಲ್‌ನಲ್ಲಿ ಮುಳುಗಿ ಹೋಗಿದ್ದ. ಮಾದೇವನಿಗೆ ಆ ಡ್ರೈವರಣ್ಣನ ಕಾಯಕ ಅಂದರೆ ಒಂದು ಆಟೋ ಡ್ರೈವಿಂಗ್; ಇನ್ನೊಂದು ಮೊಬೈಲ್ ನೋಡುವುದು ಅಂತ ಮನವರಿಕೆಯಾಗಿತ್ತು.

ಶಿವ, ಮಾದೇವನ ಗೊಂದಲ ತಳಮಳಗಳನ್ನು ನೋಡುತ್ತಿದ್ದ. ಈ ಕೆಲಸಕ್ಕೆ ಸೇರಿದ ತಿಂಗಳು ತನಗೂ ಇದೇ ಗೊಂದಲ. ಕೆಲಸಕ್ಕೆ ತಕ್ಕ ಕೂಲಿ ಅಂತ ಇದ್ದವನಿಗೆ ಆ ಸುಂದರರಾಜ ಆರಂಭದಲ್ಲೇ ತಿಳಿವಳಿಕೆ ನೀಡಿದ್ದ. ಆದರೂ ತಾನು ಮೊದಲ ತಿಂಗಳ ಕೂಲಿ ಕಳಕೊಂಡೇ ಪಾಠ ಕಲಿತದ್ದಲ್ಲವಾ?

ಅಷ್ಟರಲ್ಲಿ ಕಾರೊಂದು ಭರ್ರನೆ ಬಂದು ಪಾಳಿನ ಅಂಚಿನಲ್ಲಿ ನಿಂತಿತು. ಈಗಾಗಲೇ ಬಟವಾಡೆ ಮುಗಿದು